ದಿನಾಂಕಃ 18-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ **5** ನೇ ಪ್ರತಿವಾದಿ ಪರ ಶ್ರೀ ಪಿ ಪಿ ವಕೀಲರಿಂದ

ನನ್ನ ತಂದೆ ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ನಾನು ಸಣ್ಣವಳಿದ್ದೆ. ನನ್ನ ತಂದೆ ತೀರಿಕೊಂಡಾಗ ನನಗೆ 8 ವರ್ಷ ವಯಸ್ಸು ಇತ್ತು. ನಮ್ಮ ಮನೆತನದ ಆಸ್ತಿಗಳಲ್ಲಿ ನನ್ನ ತಾಯಿ ಮತ್ತು ಚಿಕ್ಕಪ್ಪಂದಿರು ನನ್ನ ತಂದೆ ತೀರಿಕೊಂಡ ನಂತರ ವಿಭಾಗ ಮಾಡಿಕೊಂಡಿರುತ್ತಾರೆ. ಯಾವ ವರ್ಷದಲ್ಲಿ ಸದರಿ ವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿರವರು ವಿಭಾಗ ಮಾಡಿಕೊಂಡು ಸುಮಾರು 40 ವರ್ಷಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಮತ್ತು ತಾಯಿಗೆ ನಾವು ನಾಲ್ಕು ಜನ ಮಕ್ಕಳು ಇರುತ್ತೇವೆ. ಸದರಿ ಮಕ್ಕಳಲ್ಲಿ ನಾನೇ ದೊಡ್ಡವಳು ಎಂದರೆ ಸರಿ. ಉಳಿದ ಸಹೋದರಿಯರು ನನಗಿಂತ ಚಿಕ್ಕವರು ಎಂದರೆ ಸರಿ. ನಾನು ಮದುವೆ ಆಗುವ ಪೂರ್ವದಲ್ಲಿ ನಾನು ಮತ್ತು ನನ್ನ ತಾಯಿ ಒಂದೇ ಮನೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಾಯಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಮದುವೆ ಆಗುವ ತನಕ ನನ್ನ ಪಾಲನೆ-ಪೋಷಣೆಯನ್ನು ನನ್ನ ತಾಯಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರ ಪಾಲನೆ-ಪೋಷಣೆಯನ್ನು ಮತ್ತು ಮದುವೆಯನ್ನು ನನ್ನ ತಾಯಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನಮ್ಮನ್ನು ನಮ್ಮ ತಾಯಿ ಹೊಲದಿಂದ ಬಂದಂತಹ ಆದಾಯದಿಂದ ಪಾಲನೆ ಮತ್ತು ಪೋಷಣೆ ಮಾಡಿರುತ್ತಾಳೆ ಎಂದರೆ ಸರಿಯಲ್ಲ.

ದಾವಾ 2 ನೇ ಆಸ್ತಿಯನ್ನು 5 ನೇ ಪ್ರತಿವಾದಿ 1991 ರಲ್ಲಿ ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1991 ನೇ ಸಾಲಿನಲ್ಲಿ ನಾನು ವಯಸ್ಸಿಗೆ ಬಂದಿದ್ದೆ ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ನನಗೆ ನಮ್ಮ ಮನೆತನದ ಆಗುಹೋಗುಗಳು ಗೊತ್ತಾಗುತ್ತಿದ್ದವು ಎಂದರೆ ಸರಿಯಲ್ಲ. ನಾಗರೆಡ್ಡೆಪ್ಪ ದಾವಾ 2 ನೇ ಆಸ್ತಿಯನ್ನು ಖರೀದಿ ಮಾಡಿದ ನಂತರ ಸದರಿ ಆಸ್ತಿಯನ್ನು ಆತನ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ದಾವಾ 2 ನೇ ಆಸ್ತಿಯು 5 ನೇ ಪ್ರತಿವಾದಿಯ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 5 ನೇ ಪ್ರತಿವಾದಿಯ ತಂದೆ 5 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರದ ಮುಖಾಂತರ ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ದಾವಾ 2 ನೇ ಆಸ್ತಿಯನ್ನು ನಾಗರೆಡ್ಡಪ್ಪ ಖರೀದಿ ಮಾಡಿದ ದಿನಾಂಕದಿಂದ ಇಲ್ಲಿಯತನಕ ಸದರಿ ರವರು ಸದರಿ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಸೇರಿದ ಬೇರೆ ಆಸ್ತಿಗಳು ಇರುವುದಿಲ್ಲ.

ನನ್ನ ತಾಯಿ ಈ ಪ್ರಸ್ತುತ ಅಂಬಾಮಠದಲ್ಲಿ ವಾಸವಾಗಿರುತ್ತಾಳೆ. ಸದರಿ ಗ್ರಾಮದ ಒಂದು ಸರ್ಕಾರಿ ಜಾಗೆಯಲ್ಲಿ ನನ್ನ ತಾಯಿ ವಾಸ ಮಾಡುತ್ತಿದ್ದಾಳೆ. ದಾವಾ ಹಾಕಿದ ನಂತರ ದಾವಾ 2 ನೇ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ನಾನು ದಾವಾ ಹೂಡುವ 32 ವರ್ಷಗಳ ಹಿಂದೆ 5 ನೇ ಪ್ರತಿವಾದಿಯ ದೊಡ್ಡಪ್ಪನಾದ ನಾಗರೆಡ್ಡಪ್ಪ ದಾವಾ ಶೆಡ್ಯೂಲ್ 2 ನೇ ಆಸ್ತಿಯನ್ನು ಖರೀದಿ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡುವ ಸಂದರ್ಭದಲ್ಲಿ ನನ್ನ ತಂದೆ ತೀರಿಕೊಂಡಿದ್ದರಿಂದ ನಮ್ಮ ಕುಟುಂಬದವರಿಗೆ ಹಣದ ಅವಶ್ಯಕತೆ ಇದಿದ್ದರಿಂದ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರಿಯರ ಮದುವೆಯ ಖರ್ಚುಗಳಿಗಾಗಿ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಮೋಸ ಮಾಡಿ ಖರೀದಿ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳಲ್ಲಿ ನಾನು ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಅಂತಾ ಸುಳ್ಳು ವಿಷಯ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 2 ನೇ ಆಸ್ತಿಯನ್ನು ಮಾರಾಟ ಮಾಡಿ 10 ವರ್ಷಗಳ ನಂತರ ನನ್ನ ತಾಯಿ ದಾವಾ ಶೆಡ್ಯೂಲ್ 1 ನೇ ಮತ್ತು 3 ನೇ ಆಸ್ತಿಗಳನ್ನು ಮಾರಾಟ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ ನಮ್ಮ ಮನೆತನಕ್ಕೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತವರು ಮನೆಗೆ ದಾವಾ ಹೂಡುವ ಮೊದಲು ಹೋಗುವುದು ಮತ್ತು ಬರುವುದು ಮಾಡುತ್ತಿದ್ದೆ ದಾವಾ ಹೂಡಿದ ನಂತರ ಹೋಗುತ್ತಿಲ್ಲ. ನನ್ನ ತಾಯಿ ದಾವಾ ಆಸ್ತಿಗಳಿಂದ ಬಂದಂತಹ ಬೆಳೆಯ ಪಾಲನ್ನು ಕೊಡುತ್ತಿದ್ದಳು ಎಂದು ಸುಳ್ಳು ವಿಷಯ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಸಹಿ ಇಲ್ಲದೇ ಏಕೆ ಮಾರಾಟ ಮಾಡಿರುತ್ತೀರಿ ಅಂತಾ ನನ್ನ ತಾಯಿಯನ್ನು ನನಗೆ ಗೊತ್ತಾದ ನಂತರ ಕೇಳಿರುತ್ತೇನೆ. ಖರೀದಿ ಪತ್ರ, ವಿಭಾಗಪತ್ರ ಮತ್ತು ದಾನಪತ್ರಗಳನ್ನು ಈ ದಾವೆಯನ್ನು ಹೊರತುಪಡಿಸಿ ಬೇರೆ ಎಲ್ಲೂ ಪ್ರಶ್ನಿಸಿಲ್ಲ. ದಾವಾ 2 ನೇ ಆಸ್ತಿಯ ಚಕಬಂದಿಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಚಕಬಂದಿ ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು

ನಾನು ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಸ್ವಾಧೀನದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿಯ ಚಕಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾಗರೆಡ್ಡೆಪ್ಪ ಖರೀದಿ ಮಾಡಿದ ಖರೀದಿ ಪತ್ರದ ಸಂಖ್ಯೆ ನನಗೆ ಗೊತ್ತಿಲ್ಲ ಏಕೆಂದರೆ ನಾನು ಓದಿಲ್ಲ. ಈ ದಾವೆಯಲ್ಲಿ ನಾಗರೆಡ್ಡೆಪ್ಪ ಖರೀದಿ ಮಾಡಿದಂತಹ ಆಸ್ತಿಯ ಖರೀದಿ ಪತ್ರವನ್ನು ರದ್ದುಪಡಿಸಬೇಕು ಅಂತಾ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ಅಂಶಗಳು ಸರಿ ಇರುತ್ತವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಅಪರ ಜೆ.ಎಮ್.ಎಫ್.ಸಿ., ಸಿಂಧನೂರು.